

ಅರುಣ ಪಿ. ಭಟ್ಟ


## ವಾರಭವಿಷ್ಯ: 21.08.2025ರಿಂದ 27.08.2025ರವರೆಗೆ




ಬಹಳ ಮುಖ್ಯವಾದ ಪಟ್ಟಿಯೊಂದನ್ನು ಸಿದ್ಧಮಾಡಿಕೊಳ್ಳಲು ಸಿದ್ಧರಾಗುತ್ತೀರಿ. ಕೆಲವು ವಿಚಾರಗಳು ಕಣ್ತಪ್ಪಿನಿಂದ ಬಿಟ್ಟು ಹೋಗುವ ಸಾಧ್ಯತೆ ಇದೆ. ಹಿರಿಯ ಅಧಿಕಾರಿಗಳು ಬೇಸರಿಸಿಕೊಳ್ಳುತ್ತಾರೆ. ಈ ಅವಧಿಯಲ್ಲಿ ತಾಳ್ಮೆ ಮತ್ತು ಧೈರ್ಯ ಬಹಳ ಮುಖ್ಯವಾಗುತ್ತದೆ. ಮುಖ್ಯವಾಗಿ ಸಮಯದ ಕೊರತೆ ವಿಪರೀತವಾಗಿ ಕಾಡುತ್ತದೆ. ವ್ಯಾಪಾರ ವಿಸ್ತರಣೆಗೆ ಶ್ರಮ ಹಾಕುತ್ತೀರಿ. ಶುಭದಿನ: 26. ಶ್ರೀದುರ್ಗಾಪಾರಾಯಣ ಮಾಡಿರಿ




ವ್ಯಾಪಾರ ಪರಾಮರ್ಶೆಗೆ ಹೆಚ್ಚು ಸಮಯವನ್ನು ಮೀಸಲಿಡಲಿದ್ದೀರಿ. ಆರೋಗ್ಯದಲ್ಲಿ ಏರುಪೇರಾಗುವ ಸಾಧ್ಯತೆಗಳಿವೆ. ಆಹಾರ ನೀರಿನ ಸೇವನೆಯಲ್ಲಿ ಬಹಳ ಎಚ್ಚರಿಕೆಯಿಂದ ಇರಬೇಕು. ಉದ್ಯೋಗ ಸ್ಥಳದಲ್ಲಿ ಒತ್ತಡದ ಸನ್ನಿವೇಶ ಎದುರಾಗಲಿದೆ. ವೈಯಕ್ತಿಕ ಸಂಬಂಧದಲ್ಲಿ ಸಂಗಾತಿ ಹೇಳುವ ಕೆಲವು ವಿಚಾರಗಳನ್ನು ಪೂರ್ತಿ ಮಾಡಲು ಹೆಚ್ಚು ಸಮಯ ಮೀಸಲಿಡುತ್ತೀರಿ. ಶುಭದಿನ: 25. ವಿಷ್ಣು ಸಹಸ್ರನಾಮ ಪಠಿಸಿರಿ.





ವಾರದ ಶುರುವಿನಲ್ಲಿ ಕೌಟುಂಬಿಕ ವಿಚಾರದಲ್ಲಿ ಉತ್ತಮ ಅವಕಾಶಗಳು ದೊರೆಯಲಿವೆ. ಅವಕಾಶಗಳನ್ನು ಪರಿಣಾಮಕಾರಿಯಾಗಿ ಬಳಸಿಕೊಳ್ಳಲಿದ್ದೀರಿ. ಈ ಅವಧಿಯಲ್ಲಿ ನೀವು ಹಾಕುವ ಶ್ರಮಕ್ಕೆ ಅದ್ಭುತವಾದ ಯಶಸ್ಸು ದೊರೆಯಲಿದೆ. ಸಕಾರಾತ್ಮಕ ಫಲಿತಾಂಶ ಪಡೆಯಲಿದ್ದೀರಿ. ಉನ್ನತ ಶಿಕ್ಷಣದಲ್ಲೂ ಉತ್ತಮ ಬೆಳವಣಿಗೆ ಇದೆ. ಶುಭದಿನ: 24. ಹನುಮಾನ್ ಚಾಲೀಸ್ ಪಠಿಸಿರಿ.





ವಾರದ ಶುರುವಿನಲ್ಲಿ ವೈಯಕ್ತಿಕ ಹಾಗೂ ವೃತ್ತಿಪರ ಜೀವನದಲ್ಲಿ ಕೆಲವು ಬಿಕ್ಕಟ್ಟು ಹಾಗೂ ಸಮಸ್ಯೆಗಳು ಎದುರಾಗುತ್ತವೆ. ವಾರದ ಮಧ್ಯದಲ್ಲಿ ಆರೋಗ್ಯ ಚೇತರಿಸಿಕೊಳ್ಳುತ್ತದೆ. ಕೌಟುಂಬಿಕವಾಗಿ ಸಂತೋಷ ಸಮಾಧಾನ ಇರುತ್ತದೆ. ವೈಯಕ್ತಿಕ ಸಂಬಂಧ ಮತ್ತು ಆರೋಗ್ಯ ಅತ್ಯುತ್ತಮವಾಗುತ್ತದೆ. ಸಂಬಂಧಗಳು ಸಾಮಾನ್ಯವಾಗಿ ಕಾಣಲು ಆರಂಭಿಸುತ್ತದೆ. ಶುಭದಿನ: 23. ಈಶ್ವರನಿಗೆ ರುದ್ರಾಭಿಷೇಕ ಮಾಡಿರಿ.




ವಾರದ ಆರಂಭವು ಬಹಳ ಸಂತೋಷವಾಗಿರುತ್ತದೆ. ಒಂದು ಕಡೆ ಆದಾಯ ಹೆಚ್ಚಿಸಿಕೊಳ್ಳುವುದಕ್ಕೆ ಉತ್ತಮ ಅವಕಾಶಗಳಿವೆ. ಇನ್ನೊಂದು ಕಡೆ ಮನೆಯನ್ನು ಸಲೀಸಾಗಿ ನಡೆಸಲು ಬೇಕಾದ ತೀರ್ಮಾನಗಳನ್ನು ಸರಿಯಾದ ಸಮಯದಲ್ಲಿ ಕೈಗೊಳ್ಳುತ್ತೀರಿ. ಇದರಿಂದ ನಿಮ್ಮ ಆತ್ಮವಿಶ್ವಾಸ ಮತ್ತಷ್ಟು ಹೆಚ್ಚಾಗಲಿದೆ. ನಿದ್ರೆಯ ವಿಚಾರದಲ್ಲಿ ತೊಂದರೆ ಎದುರಾಗಲಿದೆ. ಶುಭದಿನ: 22. ಸೌಂದರ್ಯಲಹರಿ ಪಠಿಸಿರಿ.





ವ್ಯಾಪಾರಸ್ಥರು ಉನ್ನತಿಗೆ ಹೆಚ್ಚು ಶ್ರಮ ಹಾಕಲಿದ್ದೀರಿ. ಆರೋಗ್ಯ ಉತ್ತಮವಾಗಿ ಇರುತ್ತದೆ. ಜತೆಗೆ ಯಾವುದೇ ಚಿಂತೆ ಇರುವುದಿಲ್ಲ. ಗ್ರಹಗತಿಗಳು ಶುಭ ದೃಷ್ಟಿ ಬೀರುವ ಸಮಯ ಇದು. ಸಾಲ ನೀಡಿದ್ದರೆ ಅದರ ವಸೂಲಿ ಆಗುತ್ತದೆ. ಉದ್ಯೋಗದ ಸನ್ನಿವೇಶವು ಈ ಹಿಂದಿನಂತೆಯೇ ಮುಂದುವರಿಯಲಿದೆ. ದೂರ ಪ್ರಯಾಣ ಮಾಡುವ ಯೋಗ ಇದೆ. ಶುಭದಿನ: 24. ಗಣಪತಿಗೆ ದೂರ್ವಾರ್ಚನೆ ಮಾಡಿಸಿರಿ.





ಮಾಧ್ಯಮ ಕ್ಷೇತ್ರದಲ್ಲಿ ಕಾರ್ಯನಿರ್ವಹಿಸುವವರಿಗೆ ಖ್ಯಾತಿ ಯಶಸ್ಸು ದೊರೆಯುತ್ತದೆ. ಮನೆಯಲ್ಲಿ ಧಾರ್ಮಿಕ ಕಾರ್ಯಕ್ರಮಗಳನ್ನು ಆಯೋಜಿಸುವ ಸಾಧ್ಯತೆ ಇದೆ. ದೈನಂದಿನ ಕೆಲಸ ಕಾರ್ಯಗಳಲ್ಲಿ ಏರುಪೇರಾಗುತ್ತದೆ. ಉದ್ಯೋಗದಲ್ಲಿ ಬಡ್ತಿ ದೊರೆಯುವ ಸಾಧ್ಯತೆಗಳಿವೆ. ವಾರದ ಅಂತ್ಯಕ್ಕೆ ಸರಿಯುತ್ತಾ ಸಾಮಾಜಿಕ ಸ್ಥಾನಮಾನ ಹೆಚ್ಚಳ ಆಗುತ್ತದೆ. ಶುಭದಿನ: 22. ನವಗ್ರಹ ಸ್ತೋತ್ರ ಪಠಿಸಿರಿ.





ನಿಮ್ಮ ಪ್ರಭಾವ ಅಷ್ಟಾಗಿ ಕೆಲಸಕ್ಕೆ ಬರುತ್ತಿಲ್ಲ ಎಂಬ ಆತಂಕ ಎದುರಾಗುತ್ತದೆ. ದುರ್ಬಲವಾಗುತ್ತಿರುವ ವರ್ಚಸ್ಸನ್ನು ಬಲಿಷ್ಠಗೊಳಿಸುವ ನಿಟ್ಟಿನಲ್ಲಿ ಹೆಚ್ಚಿನ ಕೆಲಸ ಮಾಡುತ್ತೀರಿ. ಸಂಬಂಧದಲ್ಲಿ ಪರಸ್ಪರ ನಿಂದನೆಗಳನ್ನು ಮಾಡುವ ಸಾಧ್ಯತೆ ಇದೆ. ಧಾರ್ಮಿಕ ಕಾರ್ಯಕ್ರಮಗಳಲ್ಲಿ ಬಿಡುವಿಲ್ಲದೆ ತೊಡಗಿಸಿಕೊಳ್ಳುತ್ತೀರಿ. ಹತ್ತಿರ ಪ್ರದೇಶಗಳಿಗೆ ಪ್ರಯಾಣ ಮಾಡಲಿದ್ದೀರಿ. ಶುಭದಿನ: 21. ಶನಿ ಸ್ತೋತ್ರ ಪಠಣ ಮಾಡಿರಿ.





ಸಾರ್ವಜನಿಕ ಸಂಪರ್ಕ ಹೆಚ್ಚಿಸಿಕೊಳ್ಳಲು ಹೆಚ್ಚು ಶ್ರಮ ಹಾಕುತ್ತೀರಿ. ಈ ಪ್ರಯತ್ನದಿಂದ ನಿಮಗೆ ಲಾಭ ಆಗುತ್ತದೆ. ಇನ್ನಷ್ಟು ಸೇವೆಗಳನ್ನು ನಿಮ್ಮ ಉದ್ಯಮದ ಜೊತೆ ಸೇರ್ಪಡೆ ಮಾಡಲಿದ್ದೀರಿ. ಆ ಮೂಲಕ ಇನ್ನೂ ಹೆಚ್ಚು ದುಡಿಯಬೇಕು ಎಂಬ ನಿಮ್ಮ ಉದ್ದೇಶ ಈಡೇರಿದಂತಾಗುತ್ತದೆ. ವೈವಾಹಿಕ ಜೀವನವು ಸಾಮಾನ್ಯವಾಗಿರುತ್ತದೆ. ಸವಾಲುಗಳು ಎದುರಾಗುತ್ತವೆ. ಶುಭದಿನ: 25. ಶ್ರೀವೆಂಕಟೇಶ್ವರ ಸ್ತೋತ್ರ ಪಠಿಸಿರಿ




ವಾರದ ಆರಂಭದಲ್ಲಿ ವ್ಯಾಪಾರ ಉದ್ಯಮ ಹಾಗೂ ವ್ಯವಹಾರದ ಬಗ್ಗೆ ಗಮನ ಹೆಚ್ಚು ನೀಡಬೇಕಾಗುತ್ತದೆ. ನಿಮ್ಮ ಜೊತೆ ಕೆಲಸ ಮಾಡುವವರಿಗೆ ಪ್ರೋತ್ಸಾಹ ನೀಡುತ್ತೀರಿ. ಸಂಗಾತಿಯನ್ನು ಓಲೈಸುವ ಸಲುವಾಗಿ ಇಷ್ಟವಾಗುವ ಉಡುಗೊರೆಗಳನ್ನು ನೀಡುವ ಸಾಧ್ಯತೆ ಇದೆ. ವಾರದ ಅಂತ್ಯಕ್ಕೆ ಸರಿಯುತ್ತಾ ಅನಾರೋಗ್ಯ ಸಮಸ್ಯೆಗಳು ಕಾಡಬಹುದು. ಖರ್ಚು ಹೆಚ್ಚಾಗಲಿದೆ. ಶುಭದಿನ: 23. ಶಿವಕವಚ ಪಠಣ ಮಾಡಿರಿ.




ವಾರದ ಶುರುವಿನಲ್ಲಿ ಹಣದ ಸದುಪಯೋಗ ಮಾಡಿಕೊಳ್ಳುವ ಯೋಜನೆ ರೂಪಿಸಲಿದ್ದೀರಿ. ನಿಮ್ಮ ಗುರಿಯನ್ನು ಅಂದುಕೊಂಡ ಸಮಯಕ್ಕಿಂತ ಮುಂಚಿತವಾಗಿಯೇ ತಲುಪುವ ಸಾಧ್ಯತೆಗಳಿವೆ. ಯಾವುದೇ ವಿಚಾರದಲ್ಲಿ ನನಗೆ ತಿಳಿದಿದ್ದೇ ಸತ್ಯ ಎಂಬ ಹಟಮಾರಿತನ ಒಳ್ಳೆಯದಲ್ಲ. ವಾರದ ಅಂತ್ಯಕ್ಕೆ ಸರಿಯುತ್ತಾ ಆರೋಗ್ಯ ಸುಧಾರಿಸುತ್ತದೆ. ಆಸ್ತಿ ಖರೀದಿ ಮಾಡುವ ಸಾಧ್ಯತೆಗಳಿವೆ. ಶುಭದಿನ: 22. ದಕ್ಷಿಣಾಮೂರ್ತಿ ಸ್ತೋತ್ರ ಪಠಿಸಿರಿ.




ಈವರೆಗೆ ಕೆಲಸಗಳು ಸರಿಯಾಗಿ ಇವೆಯೇ ಎಂದು ಪರಿಶೀಲನೆ ಮಾಡಲಿದ್ದೀರಿ. ನೀವು ಖರ್ಚು ಮಾಡಿದ ಹಣಕ್ಕೆ ತಕ್ಕ ಪ್ರತಿಫಲ ಇಲ್ಲ ಎಂದು ಸ್ವಲ್ಪ ಮಟ್ಟಿಗೆ ಬೇಸರ ಆಗುತ್ತದೆ. ಇನ್ನು ಆರೋಗ್ಯ ಉತ್ತಮವಾಗಿರುತ್ತದೆ. ವಾರದ ಮಧ್ಯ ಭಾಗದಲ್ಲಿ ಪ್ರೇಮಿಗಳಿಗೆ ಪ್ರೇಮ ನಿವೇದನೆ ಮಾಡಿಕೊಳ್ಳುವ ಸಾಧ್ಯತೆ ಹೆಚ್ಚಾಗಿದೆ. ನೆಚ್ಚಿದವರಿಗೆ ಪ್ರೀತಿಯನ್ನು ಹೇಳಿಕೊಳ್ಳಲಿದ್ದೀರಿ. ಶುಭದಿನ:. 26 ಚಂಡಿ ಪಾರಾಯಣ ಮಾಡಿರಿ.